# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 267 (173) |
| ಸದಸ್ಯರ ಹೆಸರು | : | ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.03.2020. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಯಚೂರು ನಗರದ ಹೊರವಲಯದಲ್ಲಿ ರಿಂಗ್ ರಸ್ತೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: | ರಾಯಚೂರು ನಗರದ ಹೊರ ವಲಯದಲ್ಲಿ ರಿಂಗ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯಲ್ಲಿ ಇರುವುದಿಲ್ಲ. |
| (ಆ) | ರಾಯಚೂರು–ಬಾಚಿರಸ್ತೆ ರಾಜ್ಯ ಹೆದ್ದಾರಿ–20 ಹಾಗೂ ಕಲ್ಮಲಾ ಕ್ರಾಸ್‌ನಿಂದ ಬುಂದಿಗುಂಪಾ ಕ್ರಾಸವರೆಗೂ ರಾಜ್ಯ ಹೆದ್ದಾರಿ–23 ಇವುಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿವರ್ತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ರಾಜ್ಯ ಹೆದ್ದಾರಿ–20 (ರಾಯಚೂರು – ಬಾಚಿರಸ್ತೆ) ತಾತ್ವಿಕವಾಗಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿ, ಇವರಿಂದ ಅನುಮೋದನೆಗೊಂಡಿರುತ್ತದೆ. ಈ ಬಗ್ಗೆ ನೀತಿಗಳನ್ನು ಅಂತಿಮಗೊಳಿಸಬೇಕಾಗಿರುವುದರಿಂದ ಸದರಿ ರಸ್ತೆಗಳ ಯೋಜನಾ ತಯಾರಿಕೆಯನ್ನು ತಡೆಹಿಡಿಯಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯುವು ನಿರ್ದೇಶಿಸಿರುತ್ತದೆ.<br>ರಾಯಚೂರು ಜಿಲ್ಲೆ ಕಲ್ಮಲಾ ಕ್ರಾಸ್‌ನಿಂದ ಮಾನ್ವಿ–ಸಿಂದನೂರು–ಗಂಗಾವತಿ–ಗಿಣಿಗೆರೆ ವರೆಗೆ 173 ಕಿ.ಮೀ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಲು ದಿನಾಂಕ: 12–11–2015 ರಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿಯಿಂದ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ರಸ್ತೆಗೆ ವಿಸ್ತೃತ ಯೋಜನಾ ವರದಿ (DPR) ತಯಾರಿಸಲು M/s Secon Pvt. Ltd., Bangalore ಇವರನ್ನು ನೇಮಿಸಿದ್ದು, ಸದರಿ ರಸ್ತೆಯ ಪಂಕ್ತೀಕರಣವನ್ನು (Alignment) ದಿನಾಂಕ: 06–09–2018 ರಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿಗೆ ಅನುಮೋದನೆ ಕೋರಿ ಸಲ್ಲಿಸಲಾಗಿರುತ್ತದೆ. ಈ ಬಗ್ಗೆ ನೀತಿಗಳನ್ನು ಅಂತಿಮಗೊಳಿಸ ಬೇಕಾಗಿರುವುದರಿಂದ ಸದರಿ ರಸ್ತೆಗಳ ಯೋಜನಾ ತಯಾರಿಕೆಯನ್ನು ತಡೆಹಿಡಿಯಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ನಿರ್ದೇಶಿಸಿರುತ್ತದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ನೆರೆ ಹಾವಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಪ್ರಮುಖ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಸದರಿ ರಸ್ತೆಗಳನ್ನು ಅಭಿವೃದ್ಧಿ ಮಾಡಲು ರಾಯಚೂರು ವಿಭಾಗಕ್ಕೆ ಮಂಜೂರಾತಿ ಆಗಿರುವ ಅನುದಾನ ಎಷ್ಟು; | ಹೌದು<br><br>ಸದರಿ ರಸ್ತೆಗಳನ್ನು ಅಭಿವೃದ್ಧಿ ಮಾಡಲು ರಾಯಚೂರು ವಿಭಾಗಕ್ಕೆ ಒಟ್ಟು 11 ಕಾಮಗಾರಿಗಳಿಗೆ ರೂ.6.50 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇವುಗಳಲ್ಲಿ 4 ಕಾಮಗಾರಿಗಳು ಪೂರ್ಣಗೊಂಡಿದ್ದು, 7 ಕಾಮಗಾರಿಗಳು ಪ್ರಗತಿಯಲ್ಲಿವೆ. |

ಕಡತ ಸಂಖ್ಯೆ: ಲೋಇ 53 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ